ಹರಾಜಿನ ಪರತ್ತುಗಳು.—ಸ್ರ 1874ನೇ ಇಸವಿ ಡಿಶಂಬರ್ 1ನೇ ಮತ್ತು ಂ 48ನೇ ನಂಬರ್ ಮೈಸೂರು ಗೆಜೆಟ್ಟಿನಲ್ಲಿ ಘಾಯಿಪ್ಪಾ ಡಲ್ಪಟ್ಟ ಪ್ರಕಾರ ಇರತಕ್ಕವು, ಮತ್ತು ಹರಾಜ್ ಕಾಲದಲ್ಲಿ ವ್ಯೋವಲ್ಪಡವವು. ತೀರ್ಥಹಳ್ಳಿ, ಚಿಕ್ಕಮಗಳೂರು ಮತ್ತು ಹಾಸನ ಈ ಸ್ಥಳಗ ಳಲ್ಲಿ ಕೊಂಡುಕೊಳ್ಳುವ ಗಂಧದ ಮರಗಳ ಕಿಮ್ಮತ್ ಪೂವತೀ ಬಗ್ಯೆ ಾಯಿದೆಯು, 1885ನೇ ಇಸವೀ ಮಾರ್ಚೀ 25ನೇ ತಾರೀಖಿಗೆ ಆಖೈರಾಗುವದು.

ತಾರೀಖು 30ನೇ ಅಕ್ಟೋಬರ್ 1884.

ನಂ. 160.—ಹಾಸನದ ಮ್ಯುನಿಶಿಪ್ ಸಿ. ವೆಂಕಟರಾಯರಿಗೆ, 1884ನೇ ಇಸವಿ ಜುಲೈ 31ನೇ ಮತ್ತು ಂ 98ನೇ ನಂಬರ್‌ಉಳ್ಳ ಈ ಆಫೀಸ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ ರಜಾಕ್ಕೆ ಜಾಸ್ತಿಯಾಗಿ, ಮೆಡಿಸಿಲ್ ಸರ್ಟಿಫಿಕೇಟ್ ಮೇಲೆ ಆರುತಿಂಗಳ ರಜಾ ಕೊಡಲ್ಪಟ್ಟಿರುತ್ತೆ.

ನಂ. 161.—ಅಮಲ್ದಾರ್ರುಗಳ ಇದರಡೀ ಕಂಡ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತವೆ:—

ಕೆ. ರಾಮಸ್ವಾಮಯ್ಯಂಗಾರ್ರಿಗೆ ಮೈಸೂರಿಂದ ಶಿವಮೊಗ್ಗಕ್ಕೆ.
ಕೆ. ರಾಮಚಂದ್ರರಾಯರಿಗೆ ಗುಂಡ್ಲುಪೇಟೆ ಯಿಂದ ಮೈಸೂರಿಗೆ.
ಖಾದರ್ ಅಲ್ಲೀಯವರಿಗೆ ಹಾಸನದಿಂದ ಗುಂಡ್ಲುಪೇಟೆಗೆ.

ನಂ. 162.—ಅಮಲ್ದಾರ್ರುಗಳ ಇದರಡೀಕಂಡ ಬಡ್ತೀಗಳು, ಹಂಗಾಮಿ ತರೀಕ್, 1884ನೇ ಇಸವಿ ನವಂಬರ್ 1ನೇ ಮತ್ತು ಂ ಲಾಗಾಯತು ಹುಕುಂ ಮಾಡಲ್ಪಟ್ಟಿರುತವೆ:—

ಕೆ. ರಾಮಚಂದ್ರರಾವ್, 2ನೇ ಗ್ರೇಡಿನಿಂದ 1ನೇ ಗ್ರೇಡಿಗೆ ಬಡತಿ.
ಖಾದರ್ ಅಲ್ಲೀ, 3ನೇ ಗ್ರೇಡಿನಿಂದ 2ನೇ ಗ್ರೇಡಿಗೆ.
ಗೋಪಾಲಕೃಷ್ಣಯ್ಯಂಗಾರ್, 4ನೇ ಗ್ರೇಡಿನಿಂದ 3ನೇ ಗ್ರೇಡಿಗೆ.
ಗುಂಡಪ್ಪ, 5ನೇ ಗ್ರೇಡಿನಿಂದ 4ನೇ ಗ್ರೇಡಿಗೆ.

ಆಕ್ಟಿಂಗ್ ಅಮಲ್ದಾರ್ ಹೆಚ್. ಆರ್. ಶ್ರೀನಿವಾಸರಾಯರು, ಹಂಗಾಮಿ ತರೀಕ್ 5ನೇ ಗ್ರೇಡ್ ಅಮಲ್ದಾರರಾಗಿರತಕ್ಕದ್ದು.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮ ಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಯೆ ಹಿಂದಿನ ದಿನ ಸೆಕ್ರಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜೀದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬಯೋಜೀಬ್ ಹುಕುಂ,
ಆರ್. ವಿಜಯೀಂದ್ರರಾವ್,
ಸೆಕ್ರಟೇರಿ.

ಮಿಲಿಟೇರಿ ಇಲಾಖೆ.

ತಾರೀಖು 25ನೇ ಅಕ್ಟೋಬರ್ 1884.

ಮೈಸೂರು ಫೈದಲ್ ಫೂಜೆನಲ್ಲಿ ಇದರಡ್ಡಿಕಂಡ ಬಡ್ತಿಗಳು, ಮಾಹೆ ಮಜಕೂರು 1ನೇ ಮತ್ತು ಂ ಲಾಗಾಯತು ಹುಕುಂಮಾಡಲ್ಪಟ್ಟಿರುತವೆ:—

ವಂದನೇ ಪಟಾಲಂ ಫಸ್ಟ್ ಕ್ಲಾಸ್ ಜಮಾದಾರ್ ಮಹಮ್ಮದ್ ಅಮಿನುದ್ದಿರಿಗೆ, ಅದೆ ಪಟಾಲಂ 2ನೇ ಕ್ಲಾಸ್ ಸುಬೇದಾರಿ ಕೆಲಸಕ್ಕೆ ಬಡ್ತಿ.
ವಂದನೇ ಪಟಾಲಂ ಫಸ್ಟ್ ಕ್ಲಾಸ್ ಜವಾಲ್ದಾರ್ ಗಣೇಶಸಿಂಗ್ ಮತ್ತು ವೆರುಮಾಳ್ ಇವರಿಗೆ, ಅದೇ ಪಟಾಲಂ 2ನೇ ಕ್ಲಾಸ್ ಜಮಾದಾರಿ ಕೆಲಸಕ್ಕೆ ಬಡ್ತಿ.

ಎ. ಸಿ. ಹೇ, ಕರ್ನಲ್,
ಮಿಲಿಟೆರಿ ಸಿಕ್ರಟೇರ.